ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು, ಕರೂರು ಇವರ ನ್ಯಾಯಾಲಯ, ಕರೂರು.

ಸಂ/ಕಂ/ಹ.ಬ./159/2014-15 ದಿನಾಂಕ:24/06/2016

ಉಪಸ್ಥಿತರು: ಜಿ.ಬೈರಣ್ಣ
ಉಪ ತಹಶೀಲ್ದಾರರು, ಕರೂರು.

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ಸಿದ್ದಲಿಂಗಪ್ಪ ತಂದೆ ದಿವಗಂತ ರಾಮಣ್ಣ ಹಿರೇಹಾಳ್ ಗ್ರಾಮ ಸಿರುಗುಪ್ಪ ತಾ (ವಕೀಲರು ಶ್ರೀ ಹುಲುಗಪ್ಪ ಸಿರುಗುಪ್ಪ) | ಶ್ರೀ ಗರ್ಜೆಪ್ಪ ತಂದೆ ದಿವಂಗತ ರಾಮಣ್ಣ ಕೋತ್ತಾಲಚಿಂತ ಗ್ರಾಮ ಸಿರುಗುಪ್ಪ- ತಾಲೂಕು |

ದಾವಾ ಜಮೀನಿನ ವಿವರ:

| ಗ್ರಾಮದ ಹೆಸರು | ಸರ್ವೆ ನಂ | ವಿಸ್ತೀರ್ಣ (ಎಕರೆ) | ಹ.ಬ ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಹಿರೇಹಾಳ್ ಗ್ರಾಮ | 92/3 | 6.45 | ಹೆಚ್65/2013-14 | 140/2013-14 |

ಪೀಠಿಕೆ:

ಸಿರುಗುಪ್ಪ ತಾಲೂಕಿನ ಹಿರೇಹಾಳ್ ಗ್ರಾಮದ ಸರ್ವೆ ನಂ: 92/3 ವಿಸ್ತೀರ್ಣ:6.45 ಸೆಂಟ್ಸ್ ಎಕರೆ ಜಮೀನುಗೆ ಸಂಬಂಧಿಸಿದಂತೆ ಪೋಶಿ ಪಾಲುವಿಭಾಗ ಪ್ರಕಾರ ಸಿದ್ದಲಿಂಗಪ್ಪ ತಂದೆ ದಿವಂಗತ ರಾಮಣ್ಣ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ ಶ್ರೀ ಗರ್ಜೆಪ್ಪ ತಂದೆ ದಿವಂಗತ ರಾಮಣ್ಣ ಕೋತ್ತಾಲಚಿಂತ ಗ್ರಾಮ ಇವರು ದಿನಾಂಕ:25-07-2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತಿರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ, ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸು ನೀಡುತ್ತಾ ವಿಚಾರಣೆಯನ್ನು ದಿನಾಂಕ: 21/08/2015, 18/09/2015, 29/04/2016 ಮತ್ತು 17-06-2016 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲಾಯಿತು ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

1L P. ಅರ್ಜುನ

ಗಳು:

ವಾದಿಗಳಾದ ಶ್ರೀ ಸಿದ್ದಲಿಂಗಪ್ಪ ತಂದೆ ದಿವಂಗತ ರಾಮಣ್ಣ ಹಿರೇಹಾಳ್ ಗ್ರಾಮ ಇವರು ಹಿರೇಹಾಳ್ ಗ್ರಾಮದ ಸರ್ವೆ ನಂಬರ್ 92/3 ವಿಸ್ತೀರ್ಣ 6.45 ಎಕರೆ ಜಮೀನನ್ನು ನನ್ನ ಹೆಸರಿಗೆ ಪೋತಿ ವಿಭಾಗ ಪ್ರಕಾರ ಹಕ್ಕು ಬದಲಾವಣೆ ಸಂಧರ್ಭದಲ್ಲಿ ನನ್ನ ಸಹೋದರನಾದ ಗರ್ಜೆಪ್ಪ ತಂದೆ ರಾಮಣ್ಣ ಇವರು ತಕರಾರು ಅರ್ಜಿಸಲ್ಲಿಸಿದ್ದು ನಾವುಗಳು ಊರಿನ ಹಿರಿಯರ ಸಮಕ್ಷಮದಲ್ಲಿ ರಾಜಿಯಾಗಿದ್ದು ನನ್ನ ಭಾಗಕ್ಕೆ ಬಿಟ್ಟು ಕೊಟ್ಟು ಆಸ್ತಿಯು ಯಾವುದೇ ಆಕ್ಷೇಪಣೆ, ತಕರಾರು ಇರುವುದಿಲ್ಲಾ ತಕರಾರನ್ನು ವಾಪಸ್ಸು ತೆಗೆದು ಕೊಂಡಿರುತ್ತಾರೆ. ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ

(ಶ್ರೀ ಹೆಚ್ ಹುಲುಗಪ್ಪ ವಕೀಲರು ಸಿರುಗುಪ್ಪ ಇವರು ದಿನಾಂಕ 18-9-2016ರಂದು ವಕಾಲತ್ತು. ಅರ್ಜಿ ಸಲ್ಲಿಸಿರುತ್ತಾರೆ)

**ಪ್ರತಿವಾದಿಗಳು**

ಪ್ರತಿವಾದಿಗಳಾದ ಶ್ರೀ ಗರ್ಜೆಪ್ಪ ತಂದೆ ದಿವಂಗತ ರಾಮಣ್ಣ ಕೋತ್ತಾಲಚಿಂತ ಗ್ರಾಮ ಇವರು ಹಿರೇಹಾಳ್ ಗ್ರಾಮದ ಸರ್ವೆ ನಂಬರ್ 92/3 ವಿಸ್ತೀರ್ಣ 6.45 ಎಕರೆ ಜಮೀನು ನನ್ನ ಹೆಸರಿಗೆ ಹಕ್ಕು ಬದಲಾವಣೆಗಾಗಿ ಅರ್ಜಿಸಲ್ಲಿಸಿದ್ದು ಇದಕ್ಕೆ ನಾನು ದಿನಾಂಕ 25-7-2014ರಂದು ತಕರಾರು ಅರ್ಜಿಸಲ್ಲಿಸಿರುತ್ತೇನೆ ನಾವುಗಳು ಊರಿನ ಹಿರಿಯ ಸಮಕ್ಷಮದಲ್ಲಿ ರಾಜಿಯಾಗಿರುತ್ತೆವೆ ನನ್ನ ಯಾವುದೇ ಆಕ್ಷೇಪಣೆ ತಕರಾರು ಇರುವುದಿಲ್ಲಾ ನಾನು ಸಲ್ಲಿಸಿದ ತಕರಾರು ಅರ್ಜಿಯನ್ನು ಹಿಂಪಡೆಯುತ್ತೇನೆ ಎಂದು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಪೋತಿ ವಾರಸತ್ವ ಪ್ರಕಾರ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಈಕೆಳಕಂಡಂತೆ-

-::ಆದೇಶ::-

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಹಿರೇಹಾಳ್ ಗ್ರಾಮದ ಸರ್ವೆ ನಂಬರ್. 92/3 ವಿಸ್ತೀರ್ಣ:6.45 ಜಮೀನು ಪೋತಿ ಪಾಲುವಿಭಾಗ ಪ್ರಕಾರ ಸಿದ್ದಲಿಂಗಪ್ಪ ತಂದೆ ದಿವಂಗತ ರಾಮಣ್ಣ ಇವರ ಜಂಟಿ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ

ಈ ಆದೇಶವನ್ನು ದಿನಾಂಕ: 24-06-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ಕರೂರು.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು.
ಸಿರುಗುಪ್ಪ ತಾಲ್ಲೂಕು

ನಾಡ ಕಾರ್ಯಾಲಯ, ಕರೂರು, ಸಿರುಗುಪ್ಪ ತಾಲ್ಲೂಕು. ದಿ||..............

ಇದರ ಪ್ರತಿಯನ್ನು:

1.ವಾದಿ ಹಾಗೂ ಪ್ರತಿವಾದಿಗಳು.

2.ತಹಶೀಲ್ದಾರರ ಕಾರ್ಯಾಲಯ, ಸಿರುಗುಪ್ಪ ಗಣಕೀಕರಣ